# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 307(473) |
| ಉತ್ತರಿಸಬೇಕಾದ ದಿನಾಂಕ | : | 19.08.2026 |
| ಸದಸ್ಯರ ಹೆಸರು | : | ಶ್ರೀಮತಿ ಹೇಮಲತಾ ನಾಯಕ(ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಉಪ ಮುಖ್ಯಮಂತ್ರಿಯವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಸಾಮಾಜಿಕ ಭದ್ರತಾ ಯೋಜನೆಗಳು "Doubtful Cases" ಎಂದು ಗುರುತಿಸುವ ಪ್ರಕ್ರಿಯೆಯಲ್ಲಿ ಅರ್ಹರಾಗಿದ್ದರೂ ತಪ್ಪಾಗಿ ಗುರುತಿಸಲ್ಪಟ್ಟಿರುವ ಫಲಾನುಭವಿಗಳ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅಂತಹ ಪ್ರಕರಣಗಳ ಸಂಖ್ಯೆ ಎಷ್ಟು; | ಇ-ಆಡಳಿತ ಇಲಾಖೆಯ ಕುಟುಂಬ ದತ್ತಾಂಶದಿಂದ ಪಡೆದ ಮಾಹಿತಿಗಳನ್ನು ರಾಜ್ಯದಲ್ಲಿ ಸಾಮಾಜಿಕ ಭದ್ರತಾ ಯೋಜನೆಗಳಡಿ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳ ಮಾಹಿತಿಗಳೊಂದಿಗೆ ಸಂಯೋಜಿಸಿದಾಗ 23,14,544 ಫಲಾನುಭವಿಗಳು ಸಂದೇಹಾಸ್ಪದ ಫಲಾನುಭವಿಗಳಾಗಿ ಕಂಡು ಬಂದಿರುತ್ತಾರೆ ಹಾಗೂ ಸದರಿ ಸಂದೇಹಾಸ್ಪದ ಫಲಾನುಭವಿಗಳ ಭೌತಿಕ ಪರಿಶೀಲನೆ ಕೈಗೊಳ್ಳಲಾಗಿದೆ. |
| ಆ) | ಸಾಮಾಜಿಕ ಭದ್ರತಾ ಯೋಜನೆಗಳ ಫಲಾನುಭವಿಗಳ ಪೈಕಿ ಹಿರಿಯ ನಾಗರಿಕರು, ವಿಧವೆಯರು ಹಾಗೂ ಅಂಗವಿಕಲರ ಪಿಂಚಣಿಗಳು ತಾಂತ್ರಿಕ ಅಥವಾ ಆಡಳಿತಾತ್ಮಕ ಕಾರಣಗಳಿಂದ ಸ್ಥಗಿತಗೊಂಡಿರುವ ಪ್ರಕರಣಗಳ ಸಂಖ್ಯೆ ಎಷ್ಟು; ಈ ವರ್ಗಗಳ ಜಿಲ್ಲಾವಾರು ವಿವರಗಳನ್ನು ಸರ್ಕಾರ ನೀಡುವುದು; | ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ಕಾರಣದಿಂದ ಯಾವ ಪಿಂಚಣಿಯು ಸ್ಥಗಿತಗೊಂಡಿರುವುದಿಲ್ಲ.<br><br>ಸಂದೇಹಾಸ್ಪದ ಫಲಾನುಭವಿಗಳೆಂದು ಗುರುತಿಸಲಾದವರ ಪೈಕಿ ಭೌತಿಕ ಪರಿಶೀಲನೆ ಸಮಯದಲ್ಲಿ ದಾಖಲಾತಿಗಳನ್ನು ಹಾಜರುಪಡಿಸದ, ನೀಡಿದ ವಿಳಾಸದಲ್ಲಿ ವಾಸವಿಲ್ಲದಿದ್ದ ಮತ್ತು ಆದಾಯ ದೃಢೀಕರಣ ಪತ್ರ ಹಾಜರುಪಡಿಸದಿದ್ದ ಒಟ್ಟು 18,06,032 ಸಂದೇಹಾಸ್ಪದ ಫಲಾನುಭವಿಗಳ ಪಿಂಚಣಿಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ಒದಗಿಸಿದೆ. |
| ಇ) | ಕಲ್ಯಾಣ ಕರ್ನಾಟಕ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಜೀವನೋಪಾಯಕ್ಕಾಗಿ ಫಲಾನುಭವಿಗಳು ತಾತ್ಕಾಲಿಕವಾಗಿ ಬೇರೆ ಜಿಲ್ಲೆ ಅಥವಾ ನಗರ ಪ್ರದೇಶಗಳಿಗೆ ತೆರಳುವ ಕಾರಣದಿಂದ ಅವರನ್ನು "Doubtful Cases" ಎಂದು ಗುರುತಿಸಿ ಪಿಂಚಣಿ ಸ್ಥಗಿತಗೊಳಿಸಿರುವ ಪ್ರಕರಣಗಳಿವೆಯೇ; ಇದ್ದಲ್ಲಿ, ಸರ್ಕಾರ ಕೈಗೊಂಡಿರುವ ಪರಿಹಾರ ಕ್ರಮಗಳೇನು; | ಇ-ಆಡಳಿತ ಇಲಾಖೆಯ ಕುಟುಂಬ ದತ್ತಾಂಶದಿಂದ ಪಡೆದ ಮಾಹಿತಿಗಳನ್ನು ರಾಜ್ಯದಲ್ಲಿ ಸಾಮಾಜಿಕ ಭದ್ರತಾ ಯೋಜನೆಗಳಡಿ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳ ಮಾಹಿತಿಗಳೊಂದಿಗೆ ಸಂಯೋಜಿಸಿದಾಗ 23,14,544 ಫಲಾನುಭವಿಗಳು ಸಂದೇಹಾಸ್ಪದ ಫಲಾನುಭವಿಗಳಾಗಿ ಈ ಕೆಳಗಿನ ಮಾನದಂಡಗಳಡಿ ಕಂಡುಬಂದಿರುತ್ತಾರೆ.<br><br>• ಅರ್ಹತೆಗಿಂತ ಕಡಿಮೆ ವಯಸ್ಸಿನಲ್ಲಿ ಪಿಂಚಣಿ ಮಂಜೂರಾತಿ ಪಡೆದವರು,<br>• ಹೆಚ್ಚಿನ ಆದಾಯ ಮಿತಿ ಹೊಂದಿರುವವರು,<br>• ಹೆಚ್.ಆರ್.ಎಂ.ಎಸ್ ನಲ್ಲಿ ಇರುವವರು,<br>• ಆದಾಯ ತೆರಿಗೆ ಪಾವತಿದಾರರು,<br>• ಎ.ಪಿ.ಎಲ್ ಕಾರ್ಡ್ ಹೊಂದಿರುವವರು, |

| | | |
|---|---|---|
| | | • ಸರ್ಕಾರವು ನಿಗದಿಪಡಿಸಿರುವ ಪ್ರಮಾಣಕ್ಕಿಂತ ಕಡಿಮೆ ಅಂಗವಿಕಲತೆ ಹೊಂದಿರುವಂತಹವರನ್ನು ಸಂದೇಹಾಸ್ಪದ ಫಲಾನುಭವಿಗಳು ಎಂದು ಗುರುತಿಸಲಾಗಿದೆ.<br><br>ಜೀವನೋಪಾಯಕ್ಕಾಗಿ ತಾತ್ಕಾಲಿಕವಾಗಿ ಬೇರೆ ಜಿಲ್ಲೆಗೆ/ನಗರಕ್ಕೆ ತೆರಳಿದಾಗ ಪಿಂಚಣಿಯನ್ನು ವಾಸವಿರುವ ಜಿಲ್ಲೆ/ನಗರದಲ್ಲಿ ಪಡೆಯಲು ಅವಕಾಶ ಕಲ್ಪಿಸಲಾಗಿದೆ. |
| ಈ) | ಅರ್ಹ ಫಲಾನುಭವಿಗಳಿಗೆ ಯಾವುದೇ ತೊಂದರೆಯಾಗದಂತೆ "Doubtful Cases" ಪ್ರಕರಣಗಳನ್ನು ತ್ವರಿತವಾಗಿ ಮರುಪರಿಶೀಲಿಸಿ, ಅರ್ಹ ಫಲಾನುಭವಿಗಳು, ಸ್ಥಗಿತಗೊಂಡಿರುವ ಪಿಂಚಣಿ ಹಾಗೂ ಇತರೆ ಸೌಲಭ್ಯಗಳನ್ನು ಮರುಪ್ರಾರಂಭಿಸಲು ಸರ್ಕಾರವು ಯಾವುದೇ ವಿಶೇಷ ಕ್ರಮ ಅಥವಾ ಮಾರ್ಗಸೂಚಿಗಳನ್ನು ರೂಪಿಸಿದೆಯೇ; ಇಲ್ಲದಿದ್ದಲ್ಲಿ, ರೂಪಿಸುವುದೇ? | ಗ್ರಾಮ ಆಡಳಿತ ಅಧಿಕಾರಿಯವರಿಂದ ಸಂಯೋಜನೆ ಮೊಬೈಲ್ ಆಪ್ ಮೂಲಕ ಸಂದೇಹಾಸ್ಪದ ಫಲಾನುಭವಿಗಳ ಪರಿಶೀಲನೆ ನಂತರ ಸಂಬಂಧಪಟ್ಟ ತಾಲ್ಲೂಕು ತಹಸೀಲ್ದಾರರಿಗೂ ಸಹ ಬಿ.ಎಂ.ಎಸ್ ತಂತ್ರಾಂಶದ ಲಾಗಿನ್ ಮೂಲಕ ಅವಕಾಶ ಕಲ್ಪಿಸಿ ಅರ್ಹ ಫಲಾನುಭವಿಗಳಿಗೆ ಪಿಂಚಣಿಗಳನ್ನು ಮುಂದುವರೆಸಲು ನಿಯಮಾನುಸಾರ ಕ್ರಮವಹಿಸಿ ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲಾಗುತ್ತಿದೆ. |

**ಕಡತ ಸಂಖ್ಯೆ:ಆರ್‌ಡಿ 228 ಕೆಎಟಿ ಎಸ್‌ಎಸ್‌ಪಿ 2026**

(ಡಾ|| ಜಿ.ಪರಮೇಶ್ವರ)
ಉಪ ಮುಖ್ಯಮಂತ್ರಿ

# <u>ಅನುಬಂಧ</u>

| SL NO | District | DOUBTFUL CASES AS ON 13.08.2026 | Temperorily Suspended Records (Not available in given address/Not willing to provide documents/Income certificate not avaialble) |
|---|---|---|---|
| 1 | BAGALKOTE | 31670 | 22193 |
| 2 | BALLARI | 34494 | 22661 |
| 3 | BELAGAVI | 182759 | 151311 |
| 4 | BENGALURU RURAL | 43591 | 31012 |
| 5 | BENGALURU SOUTH | 52343 | 42302 |
| 6 | BENGALURU URBAN | 136669 | 124073 |
| 7 | BIDAR | 118082 | 93750 |
| 8 | CHAMARAJANAGARA | 62283 | 40221 |
| 9 | CHIKKABALLAPURA | 53319 | 27612 |
| 10 | CHIKKAMAGALURU | 69061 | 66710 |
| 11 | CHITRADURGA | 77834 | 54739 |
| 12 | DAKSHINA KANNADA | 64270 | 48543 |
| 13 | DAVANGERE | 104805 | 94012 |
| 14 | DHARWAD | 49700 | 43068 |
| 15 | GADAG | 19131 | 14357 |
| 16 | HASSAN | 98850 | 56788 |
| 17 | HAVERI | 64710 | 41521 |
| 18 | KALABURAGI | 118387 | 98984 |
| 19 | KODAGU | 19388 | 12786 |
| 20 | KOLAR | 94714 | 90631 |
| 21 | KOPPAL | 46094 | 40008 |
| 22 | MANDYA | 81117 | 59305 |
| 23 | MYSURU | 133831 | 111808 |
| 24 | RAICHUR | 101272 | 89387 |
| 25 | SHIVAMOGGA | 59857 | 47230 |
| 26 | TUMAKURU | 118217 | 71111 |
| 27 | UDUPI | 47502 | 15254 |
| 28 | UTTARA KANNADA | 37414 | 20074 |
| 29 | VIJAYANAGARA | 43253 | 33538 |
| 30 | VIJAYAPURA | 90346 | 83298 |
| 31 | YADGIR | 59581 | 57745 |
| **Total** | | **2314544** | **1806032** |

G. N. Susheela

ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಕೆ.ಎ.ಟಿ. & ದಾ ನಿ)
ಕರ್ನಾಟಕ ಸರ್ಕಾರದ ಸಚಿವಾಲಯ
ಬೆಂಗಳೂರು – 560 001